ನಕ್ಸಲರಿಗೆ ವಿಶೇಷ ಪ್ಯಾಕೇಜ್ ನೀಡುವುದು

15 (230); ಶ್ರೀ ಸುನೀಲ್ ಕುಮಾರ್ .ವಿ (ಕಾರ್ಕಳ)

ಅ) ನಕ್ಸಲರ ಶರಣಾಗತಿಗೆ ಸರ್ಕಾರದ ವಿಶೇಷ ಪ್ಯಾಕೇಜ್ ಯಾವ ಹಂತದಲ್ಲಿದೆ;

ಆ) ನಕ್ಸಲರನ್ನು ಸಮಾಜ ಮುಖಿಯನ್ನಾಗಿ ಮಾಡುವಲ್ಲಿ ನೇಮಿಸಲಾದ ಸಮಿತಿಯ ಕಾರ್ಯ ವ್ಯಾಪ್ತಿ ಏನು;

ಇ) ಎಷ್ಟು ಜನ ನಕ್ಸಲರು ಶರಣಾಗಿದ್ದಾರೆ, ಎಷ್ಟು ಜನ ಶರಣಾಗತಿಗಾಗಿ ಮುಂದೆ ಬಂದಿದ್ದಾರೆ.

ಈ) ಶರಣಾಗತಿ ಬಯಸುವ ನಕ್ಸಲರ ಮೇಲಿನ ಮೊಕದ್ದಮೆಯನ್ನು ಹಿಂಪಡೆಯಲಾಗುತ್ತದೆಯೇ?

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು)

ಅ) ನಕ್ಸಲರ ಶರಣಾಗತಿ ಕಾರ್ಯನೀತಿಯು 2010 ರಿಂದಲೇ ಜಾರಿಯಲ್ಲಿದ್ದು, ಅಗತ್ಯತೆಗೆ ತಕ್ಕಂತೆ ಕಾಲ–ಕಾಲಕ್ಕೆ ಪರಿಷ್ಕರಿಸುತ್ತಾ, ಪ್ರಸ್ತುತ ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಡಿ:128:ಎಸ್‌ಎಸ್‌ಟಿ:2010(ಭಾಗ–1) ದಿನಾಂಕ:19.01.2015ನ್ನು ಅನುಸರಿಸಲಾಗುತ್ತಿದೆ. ಈ ಶರಣಾಗತಿ ಕಾರ್ಯನೀತಿಯ ಉದ್ದೇಶ:– 1. ಎಡಪಂಥೀಯ ತೀವ್ರಗಾಮಿಗಳು ಸಮಾಜದ ಮುಖ್ಯವಾಹಿನಿಗೆ ಮರಳುವಂತೆ ಮಾಡುವುದು ಹಾಗೂ ಈ ರೀತಿ ತೀವ್ರಗಾಮಿಗಳಿಂದ ಸಮಾಜದಲ್ಲಾಗುವ ಹಿಂಸಾಚಾರವನ್ನು ತಡೆಗಟ್ಟುವುದು, ಮತ್ತು ಎಡಪಂಥೀಯ ತೀವ್ರಗಾಮಿಗಳ ಜಾಲದ ಹಿಡಿತದಲ್ಲಿರುವ ಯುವಕರನ್ನು ಸಮಾಜದ ಮುಖ್ಯವಾಹಿನಿಗೆ ತರುವುದು.

2. ಈ ರೀತಿ ಶರಣಾಗತರಾಗುವ ನಕ್ಸಲ್‌ರನ್ನು ಮತ್ತೆ ನಕ್ಸಲ್ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳದಂತೆ ಅವರಿಗೆ ಉದ್ಯೋಗ ಹಾಗೂ ಸ್ವಉದ್ಯೋಗ ಅವಕಾಶಗಳನ್ನು ಕಲ್ಪಿಸಿರುವುದಾಗಿರುತ್ತದೆ.

ಸೌಲಭ್ಯಗಳು:– ಈ ಯೋಜನೆಯಡಿ ಶರಣಾಗತಿ ಹೊಂದುವ ನಕ್ಸಲರನ್ನು ಎ ಮತ್ತು ಬಿ ಪಂಗಡವಾಗಿ ವಿಂಗಡಣೆ ಮಾಡಲಾಗಿದೆ. ಶರಣಾಗತರಾದವರಿಗೆ ಅನುದಾನದ ಮೊತ್ತ ₹. 5,00,000/– (ರೂಪಾಯಿ ಐದು ಲಕ್ಷಗಳು ಮಾತ್ರ ಲೋನ್ ಕಮ್ ಗ್ರಾಂಟ್) ಎರಡು ಹಂತಗಳಲ್ಲಿ ಮಂಜೂರು ಮಾಡಲಾಗುತ್ತದೆ ಹಾಗೂ ಶರಣಾಗತರಾದ ನಕ್ಸಲರು ವೃತ್ತಿಪರ ತರಬೇತಿ ಹೊಂದುವ ಆಸಕ್ತಿ ಇದ್ದಲ್ಲಿ ಮಾಸಿಕ ₹. 5000/– ಗಳನ್ನು ಒಂದು ವರ್ಷಕ್ಕೆ ಸೀಮಿತಗೊಳಿಸಿ ನೀಡುವ ಅವಕಾಶವಿರುತ್ತದೆ ಹಾಗೂ ಶರಣಾಗತರು ಓದಲು ಇಚ್ಚಿಸಿದ್ದಲ್ಲಿ ಈ ಸೌಲಭ್ಯ ಎರಡು ವರ್ಷಕ್ಕೆ ಸೀಮಿತಗೊಳಿಸಿ ನೀಡುವ ಅವಕಾಶ ಕಲ್ಪಿಸಲಾಗಿದೆ.

ಆಯುಧಗಳೊಂದಿಗೆ ಶರಣಾಗತರಾದಲ್ಲಿ ಅಂತಹವರಿಗೆ ಕೆಲವು ಭತ್ಯೆಗಳು **(Incentives)** ನೀಡುತ್ತಿದ್ದು, ವಿವರಗಳನ್ನು ದಿನಾಂಕ: 19.1.2015ರ ಆದೇಶದ ಪುಟ ಸಂಖ್ಯೆ:6–7ರಲ್ಲಿ ವಿವರಿಸಲಾಗಿದೆ.

ಆ) ನಕ್ಸಲ್ ಬಾಧಿತ ಜಿಲ್ಲೆಗಳ ಜಿಲ್ಲಾಧಿಕಾರಿ ಅಧ್ಯಕ್ಷರಾಗಿದ್ದು, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಸದಸ್ಯರಾಗಿದ್ದು, ಜಿಲ್ಲಾ ಪೊಲೀಸ್ ಅಧೀಕ್ಷಕರು ಸಮನ್ವಯಾಧಿಕಾರಿಯಾಗಿರುತ್ತಾರೆ.

ಶರಣಾಗತರಾಗಲು ಬಯಸುವ ನಕ್ಸಲ್ ಗುಂಪಿನ ಸದಸ್ಯರು ನಕ್ಸಲ್ ಬಾಧಿತ ಜಿಲ್ಲೆಗಳ ಜಿಲ್ಲಾ ಕಮಿಟಿ, ಜಿಲ್ಲಾ ಪೊಲೀಸ್ ಅಧೀಕ್ಷಕರು, ಜಿಲ್ಲಾಧಿಕಾರಿ, ಪೊಲೀಸ್ ಉಪಾಧ್ಯಕ್ಷರ ಮುಂದೆ ಶರಣಾಗತರಾಗಬಹುದು.

ಜಿಲ್ಲಾ ಕಮಿಟಿಯ ಕಾರ್ಯಗಳು:–

ಜಿಲ್ಲಾ ಕಮಿಟಿಯು ಶರಣಾಗತರಾಗಬಯಸುವ ನಕ್ಸಲರ ಸಂಪೂರ್ಣ ವಿವರಗಳನ್ನು ಕಲೆಹಾಕಿ ರಾಜ್ಯ ಕಮಿಟಿಗೆ ಕಳುಹಿಸಿ ಕೊಡಬೇಕು. ಜಿಲ್ಲಾ ಕಮಿಟಿಯು ಶರಣಾಗತನು ಯಾವ ಕೆಟಗರಿಗೆ (ಎ ಅಥವಾ ಬಿ) ಸೇರುತ್ತಾನೆ ಎಂಬುದನ್ನು ನಿರ್ಧರಿಸಬೇಕು. ಕಮಿಟಿಯು ಎರಡು ವರ್ಷದ ಅವಧಿಗೆ ಶರಣಾಗತನ ಬಗ್ಗೆ ನಿಗಾ ಇಡಲು ಓರ್ವ ನೂಡಲ್

ಅಧಿಕಾರಿಯನ್ನು ನೇಮಕ ಮಾಡಿ, ಸದರಿ ಅಧಿಕಾರಿಯು ತಿಂಗಳ ವರದಿ, ತ್ರೈಮಾಸಿಕ ವರದಿಗಳನ್ನು ಜಿಲ್ಲಾ ಸಮಿತಿಗೆ ಸಲ್ಲಿಸುವುದು, ಒಂದು ವರ್ಷದ ಅವಧಿಯಲ್ಲಿ ಆತನ ಚಲನವಲನದಲ್ಲಿ ಯಾವುದೇ ರೀತಿಯ ವ್ಯತ್ಯಯ ಕಂಡು ಬಂದಲ್ಲಿ ನೋಡಲ್ ಅಧಿಕಾರಿಯ ಶಿಫಾರಸ್ಸಿನ ಅನುಸಾರ ಆತನಿಗೆ ನೀಡಲಾದ ಎಲ್ಲಾ ಸವಲತ್ತುಗಳನ್ನು ಹಿಂತೆಗೆದುಕೊಂಡು ಶರಣಾಗತರ ಮೇಲೆ ಕಾನೂನು ಕ್ರಮವನ್ನು ಕೈಗೊಳ್ಳಬಹುದು.

ಶರಣಾಗತನಾದವನು ಪುನಃ ನಕ್ಸಲ್ ಚಟುವಟಿಕೆಯಲ್ಲಿ ಭಾಗವಹಿಸದಂತೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು ಮತ್ತು ಶರಣಾಗತರಿಗೆ ಒದಗಿಸಬೇಕಾದ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಜಿಲ್ಲಾ ಕಮಿಟಿಯು ಕ್ರಮಗಳನ್ನು ಕೈಗೊಳ್ಳುವ ಹೊಣೆಯುಳ್ಳ ಸಮಿತಿಯಾಗಿದೆ. ಶರಣಾಗತನು ತನ್ನೊಂದಿಗೆ ಬಂದೂಕು ಮತ್ತು ಇತರೆ ಸ್ಫೋಟಕ ವಸ್ತುಗಳನ್ನು ತೆಗೆದುಕೊಂಡು ಬಂದರೆ ಸಂಬಂಧಪಟ್ಟ ಜಿಲ್ಲಾ ಪೊಲೀಸ್ ಅಧೀಕ್ಷಕರು ಸದರಿ ವಸ್ತುಗಳನ್ನು ಸೂಕ್ತ ಭದ್ರತೆಯಲ್ಲಿಡಲು ವ್ಯವಸ್ಥೆಗೊಳಿಸುವುದು.

ರಾಜ್ಯ ಸಮಿತಿಯಲ್ಲಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಅಧ್ಯಕ್ಷರಾಗಿದ್ದು, ರಾಜ್ಯ ಗೃಹ ಕಾರ್ಯದರ್ಶಿ, ಪೊಲೀಸ್ ಮಹಾನಿರೀಕ್ಷಕರು ಮತ್ತು ಪೊಲೀಸ್ ಮಹಾನಿರ್ದೇಶಕರು, ರಾಜ್ಯ ಗುಪ್ತವಾರ್ತೆ ಹಾಗೂ ರಾಜ್ಯ ಆಂತರಿಕ ಭದ್ರತಾ ವಿಭಾಗ ಮುಖ್ಯಸ್ಥರು, ಶ್ರೀ ದೊರೆಸ್ವಾಮಿ, ಸ್ವಾತಂತ್ರ್ಯ ಹೋರಾಟಗಾರರು, ಶ್ರೀ ಎ.ಕೆ. ಸುಬ್ಬಯ್ಯ, ಹಿರಿಯ ನ್ಯಾಯವಾದಿಗಳು, ಶ್ರೀಮತಿ ಗೌರಿ ಲಂಕೇಶ್, ಹಿರಿಯ ಪತ್ರಕರ್ತರು ಸದಸ್ಯರಾಗಿದ್ದು, ಡಿಐಜಿಪಿ ಮತ್ತು ಕಮಾಂಡರ್‌ರವರು ಸಮನ್ವಯಾಧಿಕಾರಿಯಾಗಿರುತ್ತಾರೆ. ರಾಜ್ಯ ಕಮಿಟಿಯು ಜಿಲ್ಲಾ ಕಮಿಟಿಯು ನೀಡಿದ ಎಲ್ಲಾ ಮಾಹಿತಿ/ಶಿಫಾರಸ್ಸುಗಳನ್ನು ಪರಿಶೀಲಿಸಿ ಒಪ್ಪಿಗೆ ನೀಡುವ ಅಥವಾ ತಿರಸ್ಕರಿಸುವ ಅಧಿಕಾರ ಹೊಂದಿರುತ್ತದೆ.

(ಹೆಚ್ಚಿನ ಮಾಹಿತಿಗಾಗಿ, ಸರ್ಕಾರಿ ಆದೇಶ ಸಂ: ಹೆಚ್‌ಡಿ:128:ಎಸ್‌ಎಸ್‌ಟಿ:2010(ಭಾಗ–1) ದಿನಾಂಕ:19.01.2015ರ ಪ್ರತಿ ಲಗತ್ತಿಸಿದೆ).

ಇ) ಈವರೆಗೆ 7 ಜನ ನಕ್ಸಲರು ಶರಣಾಗತರಾಗಿರುತ್ತಾರೆ. ವಿವರ ಈ ಕೆಳಕಂಡಂತೆ ಇದೆ:–

ಕ್ರ ಸಂ.	ಹೆಸರು	ವರ್ಷ
1	ಹಾಗಲಗಂಜಿ ವೆಂಕಟೇಶ್	2010
2	ಕೋಮಲ	
3	ಮಲ್ಲಿಕಾ	
4	ಜಯ	
5	ಕೋರನಕೋಟೆ ಕೃಷ್ಣ	2011
6	ಸಿರಿಮನೆ ನಾಗರಾಜ್	2014
7	ನೂರ್ ಜುಲ್ಫೀಕರ್	

ಈ) ಘೋರ ಅಪರಾಧಗಳ ಮೊಕದ್ದಮೆಗಳ ವಿಚಾರಣೆಗಳು ನ್ಯಾಯಾಲಯದಲ್ಲಿ ಮುಂದುವರೆಯುತ್ತವೆ. ಆದರೆ ಸಾಮಾನ್ಯ ಅಪರಾಧಗಳ ಮೊಕದ್ದಮೆಗಳನ್ನು ರಾಜ್ಯ ಸರ್ಕಾರವು ಹಿಂಪಡೆಯುವ ಅಧಿಕಾರವಿರುತ್ತದೆ. ಸರ್ಕಾರವು ವಿಚಾರಣಾಧೀನ ಶರಣಾಗತ ನಕ್ಸಲೀಯರಿಗೆ ಉಚಿತವಾಗಿ ವಕೀಲರ ಸೇವೆಯನ್ನು ಒದಗಿಸುವುದು, ತ್ವರಿತವಾಗಿ ಮೊಕದ್ದಮೆ ವಿಲೇವಾರಿಗೆ ತ್ವರಿತ ನ್ಯಾಯಾಲಯಗಳನ್ನು ರಚಿಸಲು ಅವಕಾಶವಿರುತ್ತದೆ.

ಸರ್ಕಾರವು ವರ್ಷಕ್ಕೊಮ್ಮೆ ಮೇಲ್ಕಾಣಿಸಿದ ನಕ್ಸಲ್ ಶರಣಾಗತಿ ಪ್ಯಾಕೇಜಿನ ರೀತಿ–ನೀತಿಗಳನ್ನು ಸೂಕ್ತ ರೀತಿಯಲ್ಲಿ ಬದಲಾವಣೆ ಮಾಡಲು ಅವಕಾಶ ಹೊಂದಿರುತ್ತದೆ.

(ನಕ್ಸಲ್ ಶರಣಾಗತಿ ಪ್ಯಾಕೇಜಿನ ಆದೇಶ ಸಂ: ಹೆಚ್‌ಡಿ:128:ಎಸ್‌ಎಸ್‌ಟಿ:2010(ಭಾಗ–1) ದಿನಾಂಕ:19.01.2015ನ್ನು ಲಗತ್ತಿಸಿದೆ)

PROCEEDINGS OF THE GOVERNMENT OF KARNATAKA

Sub Revised Scheme for Facilitating the return of / Surrender / Assimilation and Rehabilitation of Left Wing Extremists into Mainstream of Society – Issue of Modified Guidelines

Read: 1. Government Order No. HD 128 SST 2010; Dated: 19/06/2010
2. Government Order No. HD 128 SST 2010 (P-1); Dated: 09/09/2014

PREAMBLE:-

In Karnataka, Naxal movement/Left Wing Extremism has been active in some areas that are remote and face deficit in social and economic infrastructure, unemployment, etc. This has influenced the unemployed youth to adopt left wing / extremist/ naxal ideology. Government have put in constant efforts to help bring the misguided persons into the mainstream of society. Government vide Government Order No. HD 128 SST 2010, Bangalore dated 19/06/2010 issued a surrender policy to wean away the Naxal youth from their Extremist ideology and bring them to the mainstream. It is encouraging to affirm the fact that, so far, five Naxals including women have surrendered to the District Administration/State. The District Administration has responded effectively to their demands and has taken positive steps in rehabilitating them

OBJECTIVES:-

1. The objective of the scheme is to facilitate the return of Left Wing Extremists and to contain violence by Left Wing Extremists by weaning away misguided youth and hardcore Naxals who have strayed into the fold of Left Wing Extremism and find themselves trapped in their net. The Scheme seeks to ensure

that Naxals, who have surrendered, do not revert back to extremism by providing them gainful employment and entrepreneurial opportunities. The scheme also seeks to discourage tactical surrenders by those elements who try to make use of benefits extended by the Government under this scheme to further their interest.

2. The Government have also put efforts to ensure that the gaps in development are filled up, by initiating many programmes, projects in affected areas, like skill training programme, employment generating activities, construction of foot bridges, employment of locally qualified persons against existing vacancies in Health and Educations departments and so on.

3. At this juncture this policy needs to be suitably up-graded so as to encourage more number of Naxal/Left Wing Extremists to join the mainstream of society. By doing so Government hopes that more and more Left Wing Extremists will get assimilated in the mainstream of the society and join hands with Government and society at large in constructive upliftment and development of remote areas.

Smt.Gowri Lankesh, Sr. Press Reporter and member of State Level Committee has given some suggestions to the Government to suitably modify the guidelines.

In the light of the above, Government has examined the matter further. Hence this Modified Order.

GOVERNMENT ORDER NO. HD 128 SST 2010 (P-1), BANGALORE, DATED: 19/01/2015

Under the circumstances mentioned above and in supersession of the earlier Government Orders read at (1) & (2) above, Government are pleased to

formulate the following modified rehabilitation scheme for the surrender of Naxals/Left Wing Extremist etc., and their associates and to rehabilitate them.

1. DEFINITION:-

"Left Wing Extremists"/ "Naxalites" / "Militants" / "Maoists" mean the cadres or / and members or and activists/ or / and operatives of those organization (s) / Outfit (s) declared as unlawful by the State Government under Section 16 of The Criminal Law amendment Act, 1908 or by Government of India under the Unlawful Activities (Prevention) Act, 1967 as the case may be.

a. State Government means the Government of Karnataka.
b. Reference to "he" or "his" shall mean "She" or "her" also

2. ELIGIBILITY:-

The scheme is applicable only to those militants / extremists / naxals / Left Wing supporters and activists associated with Left Wing Organizations and strong supporters of above mentioned activities who are willing to surrender with or without fire arms and who may have criminal records. They shall be categorized as follows :

CATEGORY-A :- All identified members of above organizations and underground armed group members, Central, Regional, State, District and area core-committee members of any or all or more of the above groups and all such active underground members of the above categories involved in heinous crime or one or more criminal cases registered against them.

CATEGORY-B) all such supporters, keepers, couriers, arrested and releases underground members, informers to LWE members, groups, and persons contacted by leaders for recruitment.

3. MECHANISM:-

The surrender and rehabilitation policy will be executed by a DISTRICT COMMITTEE, constituted in each district of the region affected by LWE activities as follows :

1. District Magistrate	Chairman
2. Chief Executive Officer of the Zilla Panchayat	Member
3. District Social Welfare Officer	Member
4. Superintendent of the District	Convener

One member of any civil-social organization, which is actively working at the grass root level in the affected area may be nominated by the Deputy Commissioner and Superintendent of Police and this is optional.

The Surrender and Rehabilitation will be approved by a COMMITTEE AT THE STATE LEVEL. This Committee will be chaired by the Chief Secretary and comprise the following·

(a) Home Secretary	Member
(b) D.G. and I.G.P.	Member
(c) Chief of State Intelligence	Member
(d) Head of ISD	Member
(e) Shri H.S Doreswamy, Freedom Fighter	Member
(f) Shri. A K. Subbaiah, Senior Advocate	Member
(g) Smt.Gowri Lankesh, Senior Journalist	Member
(h) Deputy Inspector General of Police (ANF)	Convener

Every surrendered extremist should satisfy the following criteria in order to become eligible for assistance for rehabilitation.

(a) He should reveal the real names and identify the activists/ members/ associates of the militant organization (s) in which he has working/ operating

(b)He should reveal the real names of financers, couriers etc and other details of the organization including source of arms and ammunition.

(c)He should make a clear confession of the entire criminal acts committed by him. He should give all the relevant details of the violent incidents he had participated in, like the names of planner and other participants, firearms/ ammunition or property looted, distribution of arms and disposal of the property etc.

(d)He should make a public statement / confession of his voluntary surrender through the media.

4. PROCESS :-

A proposal for surrender and consequent rehabilitation of the LWE group members will be placed, before the District Committee in proper format by an officer of the rank of Deputy Superintendent of Police working in the LWE affected areas It may also be initiated by any other officer or public individual but will be verified and forwarded by an officer of the rank of Deputy Superintendent of Police of the affected area. (Format is given in Appendix-I)

In cases where, a direct feeler is sent through any superior officer, public representative or members of the district or state committee, they will in turn assign an officer of the rank of Deputy Superintendent of Police of the affected area, to verify and forward the proposal

In cases where initiation through the local police establishment is felt to be counter productive, the district committee will have the powers to waive the requirement for verification and initiation by Deputy Superintendent of Police through a special resolution and accept the proposal directly. In such cases, the District Superintendent of Police will present the proposal to the committee.

The District Committee, on receiving a proposal, will discuss the following issues·

(a) The eligibility of the surrendering person under a particular scheme.

(b) The utility / usefulness / outcome / benefit of the surrender proposal in meeting the objective of combating Left Wing Extremists activities

(c) The rehabilitation scheme to be applied.

(d) Legal issues to be addressed.

The deliberations and resolution of the District Committee will be communicated to the DG& IGP, who will study and forward the proposal to the state committee.

5. PROCEDURE :-

After the approval of the proposal by which the surrender will be facilitated, the following process will be followed.

a. The surrendering LWE group member will surrender before one of the members or the District Committee.
b. The committee will ensure that the surrendered makes a public statement of voluntary surrender through the media.
c. A confession statement will be recorded in camera in which he/she discloses full information about the LWE activities in the region and names of all underground members, before the District Committee.
d. A surrender report will be prepared and placed before the District Committee *(*Appendix *-2)* The district committee, after accepting the same will forward it to the State Committee for approval.
e. After the surrender, the District Committee will resolve on the allotment and disbursal of benefits applicable.

f. The Committee will also appoint a Nodal Officer who will monitor the surrendered LWE group member for a period of two years. The Nodal Officer will submit a monthly monitoring report on the activities of the surrendered and rehabilitation process for a period of two years.

The Committee will maintain a list of persons who have been covered under this scheme. The monitoring report submitted by the Nodal Officer for each case will be compiled in a quarterly report, prepared by the convener of the District Committee *(Appendix -3)*. This report will detail the list of persons who have been selected and rehabilitated under this scheme and also make specific observations on the progress of this policy in the combat of Maoist Naxal activities.

6. **BENEFITS:-**

a) Grant –cum- loan:

A composite grant-cum – loan of an amount of Rs 5lakhs or the amount of reward announced on his/her capture, whichever is higher, will be released to the surrendering LWE group member 50% of the amount will be a onetime grant and the other 50% will be sanctioned as loan through the District Cooperative Bank.

If the surrendered is willing to take up a trade or vocation for which he has an inclination or skill, a training stipend of Rs 5,000/- per month will be paid to him, after he enrolls in an accredited course. This will be for a maximum period of one year. A similar support will be extended for pursuit of formal education for two years.

If the surrendered is eligible for a land grant he will be encouraged to submit an application and the District Committee will recommend the case after monitoring the progress of the rehabilitation.

If the surrendered brings with him any weapon or equipment, the following incentives for each weapon or equipment will be paid.

Sl. No.	Weapon /Equipment	Revised Rate of Incentive (in Rs.)
(i)	AK 47/56/74 Rifle	30,000 per weapon
(ii)	UMG/GPM/RPG/Sniper rifle	50,000 per weapon
(iii)	Pistol/Revolver	10,000 per weapon
(iv)	Rockets	3,000 per weapon
(v)	SAM Missiles	40,000 per missile
(vi)	Grenade/hand grenade/stick grenade	2000 per grenade
(vii)	Explosive material	4,000 per K.G.
(viii)	Electronic Detonators Other Detonators	100 20
(ix)	Mines	6,000 per missile
(x)	IED	2,000 each
(xi)	Satellite Phone	20,000
(xii)	VHF/HF Communication sets	10,000
(xiii)	Wireless Set (a) Short Range (b) Long Range	 2,000 per set 10,000 per set
(xiv)	Ammunition of all types	100 per round
(xv)	Remote Control Device	6,000 per device

b) Additional Incentives

If the surrendering LWE group member provides the following types of actionable information, additional incentives may be given:

(i) Information leading to the capture **or surrender** of another LWE dalam or underground member.
(ii) Information leading to the detection of arms dump.

An additional incentive which is not more than 20% of either a cash reward against the dalam member, **(in case of capture only)** or total value of the arms dump may be considered by the State Committee.

c) Support Scheme:

In cases where a member of an underground group who is not included in any list nor named in the criminal cases, but associated with **left wing ideologies / naxals,** expresses a desire to surrender, he will be considered under the Surrender Support Scheme. The benefits will be as follows;

(i) A monthly stipend of Rs.5,000/- for a period of one year, for any vocational or skill training course that he will enroll into. A similar support will be extended for formal education for two years.

(ii) If he surrenders with any weapon or equipment, an incentive for each weapon or equipment will be paid as detailed above.

d) Leverage Scheme

The combat of LWE activities involves the conversion of active over ground supporters, identification of vulnerable persons who have been approached for recruitment and restraint of LWEs who have been arrested and later released The effort is to rope in these persons into the State sponsored development process. The District Committee will consider and deliberate upon the possibility of exerting countervailing pressure on LWE activities like recruitment, propaganda etc by the following means:

(i) Address grievances and remedy problems of all the persons who are tapped by LWE groups for recruitment

(ii) Address the issues and take up dialogue with over-ground supporters who have been mislead into conducting propaganda against the State.

(iii) Provide support and any special help to LWE members who have been released from custody and are likely to rejoin the movement.

All proposals to be covered under the leverage scheme will be placed before the District Committee.

In assigning the specific benefits under the different schemes the District Committee will consider the socio-economic background of the surrendered, supporter or vulnerable person. The preference of the rehabilitated person and the utility of the benefits as a deterrent against further influence of LWE propaganda will be factored

7. CUSTODY OF SURRENDERED WEAPONS:-

The Superintendent of Police of the concerned district will be the custodian in respect of safe storage of weapons and ammunition surrendered by the naxalites.

CRIMINAL CASES :-

Heinous crimes committed by the surrendered will continue in the courts. However, State Government may, consider withdrawing cases pending against the surrendered, after following due procedure State Government may also provide free legal services/advocate to the surrendered Naxals, Fast track courts may also be constituted by the State Government for speedy trial of cases against the surrendered.

The benefits of this scheme will be extended retrospectively to the naxals who have already surrendered.

The State Government may review the working of this scheme annually and may modify its provisions as considered necessary.

By order and in the name of the
Governor of Karnataka

(Govindaswamy)
Under Secretary to Government
Home Department(Law and order)
Ph 080-22033254
e-mail.uslo-home@karnataka.gov.in

To,

The Compiler, Karnataka Gazette Bangalore for publication in the Extra Ordinary Gazette and Supply 500 copies to Home Department (Law & Order) Section, Room No. 220, 2nd Floor, Vidhana Soudha, Bangalore immediately.

Copy to:

1. PS to Chief Secretary to Government, Vidhana Soudha, Bangalore
2. Director General and Inspector General of Police, Bangalore
3. Addl. Director General of Police(Law & Order), Bangalore
4. Addl. Director General of Police(Intelligence), Bangalore
5. All the Commissioner of Police of the State
6. Deputy Commissioner of all Districts
7. PS to Hon'ble Home Minister, Vidhana Soudha, Bangalore
8. PS to Additional Chief Secretary to Government, Home Department, Vidhana Soudha, Bangalore
9. PS to Principal Secretary(PCAS) to Government, Home Department, Vidhana Soudha, Bangalore
10. Superintendent of Police of all Districts
11. All the State Level Committee Members
12. All the District Level Committee Members
13. Advisor to Hon'ble Home Minister, Vidhana Soudha, Bangalore.
14. PA to Deputy Secretary, Law & Order, Home Department, Bangalore.
15. SGF/Spare copies.

ಶ್ರೀ ವಿ. ಸುನೀಲ್ ಕುಮಾರ್: ಮಾನ್ಯ ಅಧ್ಯಕ್ಷರೆ, ನನ್ನದು ಮೂರು ಪ್ರಶ್ನೆಗಳಿವೆ. ಮೊದಲನೆಯ ಪ್ರಶ್ನೆ; ನಕ್ಸಲರು ಶರಣಾಗತಿ ಆಗಲಿಕ್ಕೆ ಸರ್ಕಾರ ಪ್ಯಾಕೇಜನ್ನು ಘೋಷಣೆ ಮಾಡಿ ಈಗಾಗಲೇ ಪ್ರಕ್ರಿಯೆಗಳನ್ನು ಆರಂಭ ಮಾಡಿದೆ. ಅದರಲ್ಲಿ ಅವರು ಹೇಳುವಂಥದ್ದು 5 ಲಕ್ಷ ರೂ.ಗಳ ಲೋನ್ ಕೊಡುತ್ತೇವೆ 5000 ರೂ.ಗಳ ಮಾಸಿಕ ಭತ್ಯೆಯನ್ನು ಕೊಡುತ್ತೇವೆ ಎನ್ನುವಂಥ ಸಂಗತಿಯನ್ನು ಉಲ್ಲೇಖ ಮಾಡಿದ್ದಾರೆ. ಸರ್ಕಾರದ ಆಧ್ಯತೆ ನಕ್ಸಲ್ ಬಾಧಿತ ಪ್ರದೇಶದ ಯುವಕರಿಗೆ ಉದ್ಯೋಗವನ್ನು ಕೊಡುವಂಥದ್ದೋ ಅಥವಾ ನಕ್ಸಲರಾಗಿ ಶರಣಾಗತಿ ಆಗಿ ಬರುತ್ತಾ ಇರುವಂಥವರಿಗೆ ಆಧ್ಯತೆಯನ್ನು ಕೊಡುವುದೋ ಎನ್ನುವಂಥದ್ದು ಮೊದಲನೆಯ ಸಂಗತಿ. ಈ ರೀತಿಯಾದ ಕಾಲಮಿತಿಯನ್ನು ಏನಾದರೂ ಸರ್ಕಾರ ನಿರ್ಧಾರ ಮಾಡಿದೆಯಾ? ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನೀವು ಪರಿಹಾರವನ್ನು ಕೊಡುತ್ತೀರೆಂದು ಆದಾಗ ಎರಡು ವರ್ಷ ನಕ್ಸಲ್ ಚಟುವಟಿಕೆ ಮಾಡಿ ನಾನು ನಂತರ ಶರಣಾಗತಿ ಆಗುತ್ತೇನೆ ಎಂದರೆ ವರ್ಷಪೂರ್ತಿ ಈ ರೀತಿಯಾದ ಚಟುವಟಿಕೆಗಳಿಗೆ ಯುವಕರು ಆಕರ್ಷಣೆ ಆಗುತ್ತಾರೆ. ಹಾಗಾಗಿ ಇದಕ್ಕೆ ಒಂದು ಕಾಲಮಿತಿಯನ್ನು ಮಾಡಿಕೊಂಡು ಇಷ್ಟು ದಿವಸದಲ್ಲಿ ಬಂದರೆ ಮಾತ್ರ ಶರಣಾಗತಿ ಎನ್ನುವುದು ಸರ್ಕಾರ ಮುಂದೆ ಇದೆಯಾ ಎನ್ನುವಂಥದ್ದನ್ನು ಸರ್ಕಾರ ಸ್ಪಷ್ಟ ಮಾಡಬೇಕು.

ಅಧ್ಯಕ್ಷರು: ನಕ್ಸಲರು ಸಮಾಜಮುಖಿ ಆಗಬೇಕೆಂದು ಕೇಳುತ್ತೀರಿ, ಉತ್ತರಕ್ಕೋ, ದಕ್ಷಿಣಕ್ಕೋ, ಪೂರ್ವಕ್ಕೋ, ಪಶ್ಚಿಮಕ್ಕೋ?

ಶ್ರೀ ವಿ. ಸುನೀಲ್ ಕುಮಾರ್: ಸರ್ಕಾರವನ್ನು ಕೇಳಬೇಕು. ಇದರಲ್ಲಿ ಏನು ಸ್ಪಷ್ಟ ಮಾಡಿದ್ದಾರೆಂದರೆ 5 ಲಕ್ಷ ರೂ.ಗಳ ಪರಿಹಾರ ಕೊಡುತ್ತೇವೆಂದು ಹೇಳಿದ್ದಾರೆ. ಯುವಕರಿಗೆ ಇವರು ಪ್ರೋತ್ಸಾಹ ಕೊಟ್ಟಂತಾಗುತ್ತದೆ. 5000 ರೂ.ಗಳ ಮಾಸಿಕ ಹಣ ಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಕೆ.ಜಿ. ಬೋಪಯ್ಯ: ಇದರಲ್ಲಿ ಕೆಟಗರಿ ಎ & ಬಿ ಎಂದು ಮಾಡಿದ್ದಾರೆ.

ಅಧ್ಯಕ್ಷರು: ಆಯಿತು.

ಶ್ರೀ ವಿ. ಸುನೀಲ್ ಕುಮಾರ್: ಕೊನೆಯಲ್ಲಿ ನೋಡಿ ಅಧ್ಯಕ್ಷರೆ, ಶರಣಾಗತಿಯಾಗುವ ನಕ್ಸಲರಿಗೆ ಉಚಿತವಾಗಿ ವಕೀಲರ ಸೇವೆಯನ್ನು ಕೊಡುತ್ತೇವೆ. ಇದೊಂದು ನಕ್ಸಲ್ ಭಾಗ್ಯ. ಸರ್ಕಾರದ ವಿರುದ್ಧ ಪೊಲೀಸರ ವಿರುದ್ಧ ದಾಳಿ ಮಾಡಿದಂಥವರಿಗೆ ಸರ್ಕಾರ ಉಚಿತವಾಗಿ ವಕೀಲರನ್ನು ಕೊಡುತ್ತೇವೆಂದರೆ.

ಅಧ್ಯಕ್ಷರು: ಅದು ಹಾಗಲ್ಲ, ಇವತ್ತು ನಕ್ಸಲರು ಏಕೆ ಇದ್ದಾರೆಂದರೆ, ಅಲ್ಲಿ ಕೆಲವು ವಿಶೇಷವಾದಂತಹ ಸಮಸ್ಯೆಗಳು ಇದ್ದಾವೆ. ಆ ಸಮಸ್ಯೆಗಳು ಬಗೆಹರಿಯದೆ ಇರುವ ಕಾರಣಕ್ಕಾಗಿ ಇವರು ಅಲ್ಲಿ ಹೋಗಿ ಜನರಿಗೆ ಜಾಗ್ರತೆ ಮೂಡಿಸುವಂಥ.

ಶ್ರೀ ಕೆ.ಜಿ. ಬೋಪಯ್ಯ: ಸಮಸ್ಯೆಗಳನ್ನು ಬಗೆಹರಿಸುವುದರ ಬಗ್ಗೆ ಏನು ಇಲ್ಲ, ಇವರ ಸರ್ಕ್ಯೂಲರ್.

ಶ್ರೀ ವಿ. ಸುನೀಲ್ ಕುಮಾರ್: ಹೊರರಾಜ್ಯದಿಂದ ಬಂದವರಿಗೆ ಇದೆ ಮಾನದಂಡವೇ?

ಅಧ್ಯಕ್ಷರು: ಅವರು ಉತ್ತರ ಹೇಳಲಿ.

ಶ್ರೀ ಆರ್. ಅಶೋಕ: ಅವರು ಅಲ್ಲಿ facility ಕೊಡಲಿ. ನಾವು 2010 ರಲ್ಲಿಯೂ ಒಂದು ಆದೇಶವನ್ನು ಮಾಡಿದ್ದೆವು. ಅವರನ್ನು ಮುಖ್ಯವಾಹಿನಿಗೆ ತರಬೇಕು ಎನ್ನುವುದು ಇದೆ. ವಾಪಸ್ಸು ತರಬೇಕು ಎನ್ನುವುದರಲ್ಲಿ ನಮ್ಮದೇನು ಭಿನ್ನಾಭಿಪ್ರಾಯವಿಲ್ಲ.

ಅಧ್ಯಕ್ಷರು: ಅವರು ಉತ್ತರವನ್ನು ಹೇಳಲಿ.

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ಅಧ್ಯಕ್ಷರೆ, ಈ ನಕ್ಸಲ್ ಶರಣಾಗತಿ ಒಂದು ಕಾರ್ಯಕ್ರಮ 2010 ರಿಂದಲೂ ಇದೆ. ಅದರ ಪ್ರಕಾರ ಕೆಲವು ನಕ್ಸಲರು ಆ ಸಂದರ್ಭದಲ್ಲಿಯೂ ಬಂದು ಶರಣಾಗತಿ ಆಗಿದ್ದಾರೆ. ಈಗ ಅದನ್ನು ನಾವು ಸ್ವಲ್ಪ ಹೆಚ್ಚಿಗೆ ಮಾಡಿದ್ದೇವೆ ಹೊರತು ಹೊಸದಾಗಿ ಏನೂ ಮಾಡಲಿಲ್ಲ. ಸುನೀಲ್ ಕುಮಾರ್‌ರವರು ಹೇಳಿದಂತೆ ನಾವು ನೇರವಾಗಿ ಪರಿಹಾರವನ್ನು

ಕೊಡುವುದಿಲ್ಲ. ಅದಕ್ಕೆ ಒಂದು District Committee ಇದೆ. ಅದರಲ್ಲಿ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರು ಇರುತ್ತಾರೆ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಇರುತ್ತಾರೆ. ಒಬ್ಬರು nonofficical ಇರುತ್ತಾರೆ, ಅವರು recommend ಮಾಡಿ State Committee ಗೆ ಬರುತ್ತದೆ. ಅದರ ಕೆಳಗಡೆ Chief Secretary ಕೆಳಗಡೆ ಒಂದು ಸಮಿತಿಯನ್ನು ಮಾಡಿ ಅವರೆಲ್ಲಾ ಮಾಡಿದ ಮೇಲೆ ನಾವು ಅದನ್ನು ಒಪ್ಪಿಕೊಂಡು ನಮ್ಮ guidelines ಪ್ರಕಾರ ಒಪ್ಪಿದವರನ್ನು ಮಾತ್ರ ನಾವು ಶರಣಾಗತಿಗೆ ಒಪ್ಪಿಕೊಳ್ಳುತ್ತೇವೆ. ನಂತರ ಅವರಿಗೆ ಈ ತರಹ ಕೆಲವೊಂದು ಸೌಲಭ್ಯಗಳನ್ನು ಕೊಡುವುದಕ್ಕೆ ಮಾಡಿದ್ದೇವೆ. 5 ಲಕ್ಷ ರೂ.ಗಳನ್ನು ಎರಡೂವರೆ ಲಕ್ಷ ರೂ.ಗಳ ಗ್ರಾಂಟ್ ಮತ್ತು ಎರಡೂವರೆ ಲಕ್ಷ ರೂ.ಗಳನ್ನು ಲೋನ್ ಮಾಡಿಕೊಡುತ್ತೇವೆ. ಇನ್ನು ಕೆಲವು ಬೇರೆ ಸವಲತ್ತುಗಳ ಸಮೇತ ನಾವು ಕೊಡುತ್ತಿದ್ದೇವೆ. ಮುಖ್ಯ ಉದ್ದೇಶವೇನೆಂದರೆ, ಯಾರು ನಿಜವಾಗಲೂ ಶರಣಾಗತಿಗೆ ಬಂದು ಮುಖ್ಯವಾಹಿನಿಗೆ ಪ್ರಜಾಪ್ರಭುತ್ವದ ನಂಬಿಕೆ ಮತ್ತು ಕಾನೂನಿನ ಅಡಿಯಲ್ಲಿ ಕೆಲಸ ಮಾಡುವುದಕ್ಕೆ ಬಂದವರಿಗೆ ಮಾತ್ರ ನಾವು ಶರಣಾಗತಿಗೆ ಒಪ್ಪಿಗೆ ಕೊಡುವುದಕ್ಕಾಗುತ್ತದೆ. ಅಂಥವರಿಗೆ ಮಾತ್ರ ನಾವು ಮಾಡುತ್ತೇವೆ, ಹೊಸದಾಗಿ ನಾವು ಮಾಡಿದ್ದು ಅಲ್ಲ. ನಿಮ್ಮ ಸರ್ಕಾರ ಇದ್ದಾಗಲೂ ಇದೆ ಧೇಯ ಧೋರಣೆ ಇತ್ತು. ಇನ್ನೊಂದು ..

ಶ್ರೀ ವಿ. ಸುನೀಲ್ ಕುಮಾರ್: 2015 ರಲ್ಲಿ ತಿದ್ದುಪಡಿ ಮಾಡಿರುವ ಹೊಸ ಆದೇಶ ಇಲ್ಲಿದೆ.

ಶ್ರೀ ಕೆ.ಜೆ. ಜಾರ್ಜ್: ಸರ್ಕಾರಕ್ಕೆ ಆಗಾಗ ತಿದ್ದುಪಡಿ ಮಾಡುವ ಅಧಿಕಾರ ಇರುತ್ತದೆ. ಆ ಸಂದರ್ಭಕ್ಕೆ ಅನುಸಾರವಾಗಿ ನಾವು ತಿದ್ದುಪಡಿಯನ್ನು ಮಾಡುತ್ತೇವೆ. ತಾವು ಇನ್ನೊಂದು ಒಳ್ಳೆಯದನ್ನು ಹೇಳಿದಿರಿ.

ಅಧ್ಯಕ್ಷರು: ಏನು ಮಾಡಬೇಕು ಎನ್ನುವುದನ್ನು ಹೇಳಿ.

ಶ್ರೀ ಕೆ.ಜಿ. ಬೋಪಯ್ಯ: ಅಧಿಕಾರ ಇದೆ ಎಂದು ಹೇಳಿ ಈಗ..

ಅಧ್ಯಕ್ಷರು: ನಾನು ಒಂದು ಹೇಳುತ್ತೇನೆ. ನಕ್ಸಲೇಟ್ಸ್ ಹುಟ್ಟುವುದಕ್ಕೆ ಕಾರಣವೇನೆಂದರೆ ಅಲ್ಲಿರುವಂಥ ಜನರ ಸಮಸ್ಯೆಗಳನ್ನು ಬಗೆಹರಿಸಲಿಲ್ಲ. ಆ ಕಾರಣಕ್ಕಾಗಿ ಇದು ಹುಟ್ಟಿದೆ.

ಶ್ರೀ ವಿ. ಸುನೀಲ್ ಕುಮಾರ್: ನಾನು ಕೇಳುತ್ತಿರುವುದು ಅದನ್ನೆ. ಆ ಭಾಗದ ನಿರುದ್ಯೋಗ ಯುವಕರಿಗೆ ಮಾನದಂಡನಾ?

ಅಧ್ಯಕ್ಷರು: ನಾನು ಒಂದು ಹೇಳುತ್ತೇನೆ ಕೇಳಿ. ನಿಮ್ಮ ಭಾಗದಲ್ಲಿ ಇದೆಯಲ್ಲಾ, ಪ್ರತಿ ಗ್ರಾಮದಲ್ಲಿರತಕ್ಕಂಥ ಅರಣ್ಯ ಹಕ್ಕು ಸಮಿತಿಯವರು ಅವರ ಮುಖಾಂತರವಾಗಿ ರಸ್ತೆ, ಮನೆ ಜಾಗ, ಭೂಮಿ, ಕೆರೆ ಅವರಿಗೆ ಮಂಜೂರು ಮಾಡಿ ಕೊಡಿ.

ಶ್ರೀ ವಿ. ಸುನೀಲ್ ಕುಮಾರ್: ನಾನು ಕೇಳುತ್ತಿರುವುದು ಆ ಭಾಗದ ಯುವಕರಿಗೆ ಆಧ್ಯತೆಯೋ ಶರಣಾಗತಿಯಾಗುವವರಿಗೆ ಆಧ್ಯತೆಯೋ ಎನ್ನುವುದು ಇಲ್ಲಿ ನನ್ನ ಪ್ರಶ್ನೆ ಇರುವಂಥದ್ದು. ನೀವು ಸಮಿತಿಯನ್ನು ಮಾಡಿದ್ದೀರಿ ಅಲ್ಲಿ ಯಾರಿದ್ದಾರೆ ಸರ್. ನಕ್ಸಲರಿಗೆ ಸಂಬಂಧ ಇರುವಂಥವವರೂ ಯಾರಾದರೂ ಸಮಿತಿಯಲ್ಲಿ ಇದ್ದಾರೆಯಾ?

ಅಧ್ಯಕ್ಷರು: ನನಗೆ ಉತ್ತರ ಕೊಡುವುದಕ್ಕೆ ಅವಕಾಶ ಕೊಟ್ಟರೆ ನಾನು ಉತ್ತರವನ್ನು ಕೊಡುತ್ತೇನೆ.

ಶ್ರೀ ವಿ. ಸುನೀಲ್ ಕುಮಾರ್: ನಕ್ಸಲರನ್ನು ಆ ಸಮಿತಿಗೆ ಹಾಕಿಕೊಂಡು ಬಿಟ್ಟರೆ ಹಾಗಾದರೆ ಪರಿಸ್ಥಿತಿ ಏನು? ನಾವು ಆ ಭಾಗದಿಂದ ಬಂದಂಥವರು. ಆ ಭಾಗದ ಸಮಸ್ಯೆ ಏನು ಎನ್ನುವುದು ನಮಗೆ ಗೊತ್ತಿದೆ. ಮೆನಸಿನಹಾಡ್ಯದಲ್ಲಿರುವ ನಕ್ಸಲರನ್ನು ಭೇಟಿ ಆದಂಥವರನ್ನು ಈ ಸಮಿತಿಯಲ್ಲಿ ಹಾಕಿಕೊಂಡರೆ ಪರಿಸ್ಥಿತಿ ಏನಾಗುತ್ತದೆ?

ಅಧ್ಯಕ್ಷರು: ನಿಮ್ಮ ಪ್ರಶ್ನೆ ಏನು ಎನ್ನುವುದನ್ನು ಕೇಳಿ.

ಶ್ರೀ ವಿ. ಸುನೀಲ್ ಕುಮಾರ್: ನಾನು ಅದನ್ನೆ ಕೇಳಿದೆ. ಕಾಲಮಿತಿ ಇದೆಯಾ? ಹೊಸ ಯುವಕರು ಎರಡು ವರ್ಷ ನಕ್ಸಲರಾಗಿ ಮತ್ತೆ ಬಂದರೆ

ಪರಿಹಾರವನ್ನು ಕೊಡುತ್ತೀರಾ? ಇದಕ್ಕೆ ಸರ್ಕಾರ ಏನು ಎನ್ನುವುದನ್ನು ಸ್ಪಷ್ಟ ಮಾಡಲಿ.

ಶ್ರೀ ಡಿ.ಎನ್. ಜೀವರಾಜ್: ನಾವು ಆ ಭಾಗದಿಂದ ಬಂದಿರುವಂಥ ಶಾಸಕರುಗಳು ನಾವು. ಕಡೆಯಪಕ್ಷ ಅಲ್ಲಿರುವ ಸಮಸ್ಯೆ ಏನು ಎನ್ನುವುದು ನಮಗೆ ಗೊತ್ತು. ನಕ್ಸಲರನ್ನು ತೆಗೆದು ಆ ಕಮಿಟಿಯನ್ನು ಹಾಕುವುದರ ಜೊತೆಗೆ ನಮ್ಮನ್ನೂ ಅದರ ಜೊತೆಗೆ ಇಟ್ಟಿದ್ದರೆ ಏನಾಗುತ್ತದೆ ಎನ್ನುವುದರ ಬಗ್ಗೆ ಒಂದು ಚರ್ಚೆ ಮಾಡಬಹುದಾಗಿತ್ತು.

ಅಧ್ಯಕ್ಷರು: ಉತ್ತರವನ್ನು ಹೇಳಿ.

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಯಾವ ನಕ್ಸಲೇಟ್‌ಗಳನ್ನೂ ಸಮಿತಿಗೆ ಹಾಕಿಲ್ಲ. ದಯವಿಟ್ಟು ಈ ರೀತಿಯ ಹೇಳಿಕೆಗಳನ್ನು ಮಾನ್ಯ ಸದಸ್ಯರು ಹೇಳಬಾರದು. ಈಗ ನಾವು ಏನು ಮಾಡುತ್ತಿದ್ದೇವೆ ಎಂದರೆ, ಎರಡು ವಿಚಾರಗಳಲ್ಲಿ ಕೆಲಸ ಮಾಡುತ್ತಿದ್ದೇವೆ. ಒಂದು ಶರಣಾಗತಿ, ಇನ್ನೊಂದು ಯಾರು ಕಾನೂನನ್ನು ಕೈಗೆ ಎತ್ತುಕೊಳ್ಳುತ್ತಾರೋ ಅವರ ವಿರುದ್ಧವಾಗಿ ನಾವು ಸುಸಜ್ಜಿತವಾದ ನಮ್ಮ Anti Naxal ಪಡೆಯನ್ನು ಮಾಡಿದ್ದೇವೆ. ನಮ್ಮ ಸರ್ಕಾರ ಬಂದ ಮೇಲೆ ಸುಮಾರು 13 ಕೋಟಿ ರೂ.ಗಳ ವೆಚ್ಚದಲ್ಲಿ ಎಲ್ಲ Anti Naxal Camp ಗಳನ್ನು ಉನ್ನತೀಕರಣ ಮಾಡಿದ್ದೇವೆ. ನಾನೂ ಕೂಡ ಆ ಕ್ಯಾಂಪ್‌ಗೆ ಭೇಟಿ ನೀಡಿದ್ದೇನೆ. ಮಾನ್ಯ ಸುನೀಲ್‌ಕುಮಾರ್‌ರವರಿಗೂ ಗೊತ್ತಿದೆ. ನಾನು ಗೃಹ ಮಂತ್ರಿಯಾದ ಮೇಲೆ ಆ ಪ್ರದೇಶದವರನ್ನು ಕರೆಸಿ ಮಾತನಾಡಿದ್ದೇನೆ. ಅಲ್ಲಿ ಆ ಪ್ರದೇಶದ ಜನ, ಅದರಲ್ಲಿಯೂ ಗಿರಿಜನರಿಗೆ ಹೆಚ್ಚಿನ development ಮಾಡುವ ವಿಚಾರದಲ್ಲಿ ಸರ್ಕಾರ ಸಮೇತ ಕೆಲಸ ಮಾಡುತ್ತಿದ್ದೇವೆ. ಇನ್ನೊಂದು ವಿಷಯ, ನಮ್ಮ police recruitment ನಲ್ಲಿ ಆ ಗಿರಿಜನರಿಗೂ ಕೂಡ ಭಾಗವಹಿಸುವುದಕ್ಕೆ ನಾವು ಅವಕಾಶ ಕೊಡಬೇಕು. ತಮಗೆ ಗೊತ್ತಿರುತ್ತದೆ ಆ ಗಿರಿಜನರು ಸ್ವಲ್ಪ ಎತ್ತರದಲ್ಲಿ ಹಾಗೂ ತೂಕದಲ್ಲಿ ಕಡಿಮೆ ಇರುತ್ತಾರೆ. ಆದರೆ ಗಟ್ಟಿಮುಟ್ಟಾಗಿರುತ್ತಾರೆ. ಅದಕ್ಕೆ ಅದನ್ನು relax ಮಾಡಿ ಅವರು ಪೊಲೀಸ್ ಇಲಾಖೆಯಲ್ಲಿಯೂ

ಬರುವಂತಹ ಕೆಲಸ ಮಾಡುತ್ತಿದ್ದೇವೆ. ಅದರ ಜೊತೆಗೆ ನಾವು Tata Institute ರವರ ಜೊತೆ discuss ಮಾಡುತ್ತಿದ್ದೇವೆ. ಅವರು skill training ಕೊಡಲು ಮುಂದೆ ಬಂದಿದ್ದಾರೆ. ಅವರಿಗೆ ಮೂಲಭೂತ ಸೌಕರ್ಯ ಕೊಟ್ಟರೆ ಅದನ್ನೂ ಆದಷ್ಟು ಬೇಗನೆ ಪ್ರಾರಂಭ ಮಾಡುತ್ತಾರೆ. ತಾವು ಹೇಳುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ನಾವು ಆ ಭಾಗದ ಜನರ ಸಮಸ್ಯೆಯನ್ನು ಪರಿಹಾರ ಮಾಡಬೇಕು. ಸಾಕಷ್ಟು ಕುಂದು-ಕೊರತೆಗಳು ಇವೆ. ಅದಕ್ಕೂ ಸಹ ನಮ್ಮ ಪೊಲೀಸ್ ಅಧಿಕಾರಿಗಳಿಗೆ, ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟು ನಮ್ಮ ಸರ್ಕಾರದ ಎಲ್ಲಾ ಸವಲತ್ತುಗಳು ಅವರಿಗೆ ನೇರವಾಗಿ ತಲುಪಿಸುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಅವರ ಸಹಕಾರವೂ ಬೇಕಾಗುತ್ತದೆ. ಇದು ಕೇವಲ ಸರ್ಕಾರದ ನೀತಿ ಅಲ್ಲ. ನೀವೂ ನಾವೂ ಸೇರಿ ಮಾಡುವುದು. ನೀವು ಒಳ್ಳೆಯ ಸಲಹೆಗಳನ್ನು ಕೊಟ್ಟರೆ ಅದನ್ನು ಸ್ವೀಕಾರ ಮಾಡಲು ತಯಾರಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಶ್ರೀ ವಿ. ಸುನೀಲ್ ಕುಮಾರ್: ನಾನು ಕೇಳುತ್ತಿರುವುದು ನೀವು ಕಾಲಮಿತಿ ಹಾಕಿಕೊಳ್ಳುತ್ತೀರಾ? ಇಲ್ಲವೆಂದರೆ ಈ ವರ್ಷ ಇನ್ನೊಂದಷ್ಟು ಜನರು ಸೇರಿಕೊಳ್ಳುತ್ತಾರೆ. ರಾಜ್ಯದಲ್ಲಿ ಎಷ್ಟು ಜನ ನಕ್ಸಲರು ಇದ್ದಾರೆ ಎಂದು ನಕ್ಸಲರ ಪಟ್ಟಿ ಇದೆಯೇ? ನನ್ನ ಮೂಲಭೂತ ಪ್ರಶ್ನೆ ಇಷ್ಟೆ. ನಕ್ಸಲರು ಇವತ್ತು ಒಂದಿಷ್ಟು ಯಾರೋ ಆಗುತ್ತಾರೆ. ನಾಳೆ ಮತ್ತೆ ಶರಣಾಗತಿ ಎಂದು ಬರುತ್ತಾರೆ. ಅವರಿಗೆ ಪ್ಯಾಕೇಜ್ ಕೊಡುತ್ತೀರಾ?

ಅಧ್ಯಕ್ಷರು: ಆ ರೀತಿ ಅಲ್ಲ, ಮಾನ್ಯ ಸುನೀಲ್ ಕುಮಾರ್‌ರವರೆ, ...

ಶ್ರೀ ವಿ. ಸುನೀಲ್ ಕುಮಾರ್: ರಾಜ್ಯದಲ್ಲಿ ಎಷ್ಟು ಜನ ನಕ್ಸಲರು ಇದ್ದಾರೆ ಎನ್ನುವ ಪಟ್ಟಿ ಇದೆಯೇ?

ಅಧ್ಯಕ್ಷರು: ಇವೆಲ್ಲಾ ಸಾಮಾಜಿಕ ಅನ್ಯಾಯದ ವಿರುದ್ಧ ಹೋರಾಟ ಮಾಡತಕ್ಕಂತಹ ಒಂದು ಪಡೆ. ಕ್ರಾಂತಿ ಮಾಡಬೇಕೆಂದು ಇದೆ. ಕ್ರಾಂತಿ ಆಗುವುದಿಲ್ಲ.

. **ಶ್ರೀ ವಿ. ಸುನೀಲ್ ಕುಮಾರ್:** ಕ್ರಾಂತಿ ಮಾಡುವುದಕ್ಕೆ ಆಗುವುದಿಲ್ಲವೆಂದೇ ಅವರು ಶರಣಾಗತಿಗೆ ಬಂದಿರುವುದು. ಅವರು ಅಲ್ಲಿ ಮಾಡುವುದಕ್ಕೆ ಆಗುವುದಿಲ್ಲವೆಂದು ಇಲ್ಲಿ ಬಂದಿರುವುದು.

ಅಧ್ಯಕ್ಷರು: ಅವರಿಂದ ಏನೂ ಆಗುವುದಿಲ್ಲ. ಇಲ್ಲೇ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಇದ್ದಾರೆ. ಒಂದು ಹಳ್ಳಿಯಲ್ಲಿ ನಕ್ಸಲೇಟ್‌ಗಳು ಇದ್ದರು ಎಂದು ಜಿಲ್ಲಾಧಿಕಾರಿಗಳು, Assistant Commissioner, ತಹಶೀಲ್ದಾರರು ಎಲ್ಲಾ ಹೋಗಿ ರಾತ್ರಿಯೆಲ್ಲಾ ಕುಳಿತುಕೊಂಡು 79 ಜನರಿಗೆ ಹಕ್ಕುಪತ್ರ ಕೊಟ್ಟ ಬಂದರಲ್ಲಾ, ಆ ರೀತಿ ಮಾಡುವುದಕ್ಕೆ ಅಧಿಕಾರಿಗಳಿಗೆ ಹೇಳಿ.

ಶ್ರೀ ವಿ. ಸುನೀಲ್ ಕುಮಾರ್: ನೀವು ಇಷ್ಟು ದೊಡ್ಡಪ್ರಮಾಣದಲ್ಲಿ ಪರಿಹಾರ ಕೊಡುತ್ತೀರಿ ಎಂದರೆ ಇನ್ನೊಂದು ದಿವಸ ಇನ್ನೊಂದಷ್ಟು ಯುವಕರು ಅದಕ್ಕೆ ಹೋಗುತ್ತಾರೆ.

ಶ್ರೀ ಆರ್. ಅಶೋಕ್: ನಾವು ಹೇಳುತ್ತಿರುವುದು, ಮಾನ್ಯ ಸುನೀಲ್ ಕುಮಾರ್‌ರವರ ಪ್ರಶ್ನೆಯೂ ಅಷ್ಟೆ. ಅಲ್ಲಿ ಏನೇನೂ ಸಮಸ್ಯೆ ಇದೆ, ಅವರಿಗೆ ಹಕ್ಕುಪತ್ರ ಕೊಡುವಂಥದ್ದು ಮಾಡಬೇಕು, ಅವರಿಗೆ ರೇಷನ್ ಸಿಗುವಂತೆ ಮಾಡಬೇಕು, ಕರೆಂಟ್ ಒದಗಿಸಬೇಕು. ಅದಕ್ಕೆ ದುಡ್ಡನ್ನು ಖರ್ಚು ಮಾಡಿ.

ಅಧ್ಯಕ್ಷರು: ಕುಡಿಯುವ ನೀರು ಕೊಡಬೇಕು. ಮನೆ ಕೊಡಬೇಕು.

ಶ್ರೀ ಆರ್. ಅಶೋಕ್: ಅದನ್ನು ಬಿಟ್ಟು ಐದೈದು ಲಕ್ಷ ರೂ.ಗಳನ್ನು ಅವರಿಗೆ ಕೊಟ್ಟರೆ ಅವರು ಏಕೆ ಇದನ್ನೆಲ್ಲಾ ಮಾಡುವುದಕ್ಕೆ ಹೋಗುತ್ತಾರೆ? ಅವರು ನಕ್ಸಲರು ಆಗುವುದಕ್ಕೆ ಹೋಗುತ್ತಾರೆ.

ಶ್ರೀ ವಿ. ಸುನೀಲ್ ಕುಮಾರ್: ಉಚಿತವಾಗಿ ವಕೀಲರನ್ನು ನೇಮಕ ಮಾಡಿಕೊಳ್ಳುತ್ತಾರೆ. ನಾಳೆ ಕಾಡಿಗೆ ಹೋಗುತ್ತಾರೆ. ರಾಜ್ಯದಲ್ಲಿ ಎಷ್ಟು ಜನ ನಕ್ಸಲರು ಇದ್ದಾರೆ ಎನ್ನುವ ಪಟ್ಟಿ ಇದ್ದರೆ ಅದನ್ನು ಬಿಡುಗಡೆ ಮಾಡಿ.

ಶ್ರೀ ಆರ್. ಅಶೋಕ್: ಪ್ರತಿ ತಿಂಗಳು ಅವರಿಗೆ ಐದೈದು ಸಾವಿರ ರೂ.ಗಳನ್ನು ಕೊಡುತ್ತೀರಿ ಕೊಡಿ..,

ಶ್ರೀ ವಿ. ಸುನೀಲ್ ಕುಮಾರ್: ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದಂತಹ ವಿಷಯ.

ಶ್ರೀ ಆರ್. ಅಶೋಕ್: A-category, B-category ಎಂದು ಬೇರೆ ಇದೆ.

ಶ್ರೀ ವಿ. ಸುನೀಲ್ ಕುಮಾರ್: ಇಷ್ಟು ಸೌಲಭ್ಯ ಕೊಡುತ್ತೇವೆ ಎಂದರೆ ಇನ್ನೊಂದಷ್ಟು ಜನ ನಕ್ಸಲರಾಗಿ ಹೋಗುವುದಿಲ್ಲವೇ?

ಶ್ರೀ ಕೆ.ಜೆ. ಜಾರ್ಜ್: ಇವರ ಕಾಲದಲ್ಲಿ 2010 ರಲ್ಲಿ. . .

ಅಧ್ಯಕ್ಷರು: ಮಾನ್ಯ ಸಚಿವರೆ ಅವರ ಕಾಲ, ಇವರ ಕಾಲ ಎಂದೆಲ್ಲಾ ಬೇಡ ಬಿಡಿ.

ಶ್ರೀ ಕೆ.ಜೆ. ಜಾರ್ಜ್: ನಾವು ಎಲ್ಲಾ ಮಾಡಲು ತಯಾರಿದ್ದೇವೆ. ಅಲ್ಲಿ development ಮಾಡುತ್ತೇವೆ. ಮಾನ್ಯ ಮುಖ್ಯಮಂತ್ರಿಯವರು ಹಣಕಾಸನ್ನು ಒದಗಿಸುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಆರ್. ಅಶೋಕ್: ನಕ್ಸಲರಲ್ಲಿ A-category, B-category ಎಂದು ಇದೆಯೇ? ಅದು ಏನು ಎನ್ನುವುದು ನಮಗೆ ಗೊತ್ತಿಲ್ಲ. ದಯವಿಟ್ಟು A-category ಎಂದರೆ ಏನು, B-category ಎಂದರೆ ಏನು ಏನುವುದನ್ನು ಹೇಳಿ.

ಅಧ್ಯಕ್ಷರು: ಮಾನ್ಯ ಸಚಿವರು ಉತ್ತರವನ್ನು ಹೇಳಿ.

ಶ್ರೀ ಕೆ.ಜೆ. ಜಾರ್ಜ್: ಅದರಲ್ಲಿ ಬೇಕಾದರೆ Category A ಅನ್ನು ಸವಿಸ್ತಾರವಾಗಿ ಹೇಳುತ್ತೇನೆ. "All identified members of the above organization and underground and armed group members, central, regional, state, district and area core committee members of any or all or more of the above groups and all such active underground members of the above categories involved in heinous crimes or one or more criminal case registered against them are treated as 'A' category". All such supporter ಅನ್ನು 'B' category ಎಂದು ಹೇಳುತ್ತಾರೆ. Keepers,

couriers, arrested and registered as underground members informers to LW members groups and persons contacted by the leaders for recruitment. ಯಾರು ಅವರಿಗೆ ಸಹಾಯ ಮಾಡುತ್ತಾರೆ ಅವರನ್ನು B-category ಎಂದು ಮಾಡಿದ್ದೇವೆ. Overnightಲ್ಲಿ ಯಾರೂ ನಕ್ಸಲೇಟ್ ಆಗುವುದಕ್ಕೆ ಸಾಧ್ಯವಿಲ್ಲ. ಅವರು ಸಾಕಷ್ಟು ಚಟುವಟಿಕೆಯಲ್ಲಿ ಭಾಗಿಯಾಗಿರುತ್ತಾರೆ. ಅವರ ಮೇಲೆ ನಮ್ಮ ಕೋರ್ಟ್‌ನಲ್ಲಿ ಕೇಸ್ ಇವೆ. ಅಂತಹವರನ್ನು ಮಾತ್ರ ಶರಣಾಗತಿಗಳು ಎಂದು ಹೇಳುತ್ತೇವೆ. ಮಾನ್ಯ ಸುನೀಲ್ ಕುಮಾರ್‌ರವರು ಹೇಳಿದ ಹಾಗೆ ನಾಳೆಯೇ ನಾನು ನಕ್ಸಲೇಟ್ ಎಂದು ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ district level ನಲ್ಲಿ committee ಮಾಡಿದ್ದೇವೆ. State level committee ಮಾಡಿದ್ದೇವೆ. ನೀವು ಹೇಳಿದ್ದಕ್ಕೆ ನಾನು ಒಪ್ಪಿಕೊಳ್ಳುತ್ತಿದ್ದೇನೆ. ನಮ್ಮ ಪ್ರದೇಶದ ಜನರ ಕುಂದು-ಕೊರತೆಗಳನ್ನು, ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಸರ್ಕಾರ ಆಸಕ್ತಿ ವಹಿಸಿದೆ. ಸಮಸ್ಯೆ ಬಗೆಹರಿಸಲು ಸಾಕಷ್ಟು ಹಣಕಾಸನ್ನು ಒದಗಿಸುತ್ತೇವೆ. ಎಲ್ಲಾ ಸರ್ಕಾರಿ ಕಾರ್ಯಕ್ರಮಗಳೂ ಸಹ ಅವರಿಗೆ ತಲುಪುವಂತಹ ಕೆಲಸ ಮಾಡುತ್ತೇವೆ.

ಅಧ್ಯಕ್ಷರು: ಮಾನ್ಯ ಸಚಿವರೆ ತಾವು ಹೇಳುವುದು ಸರಿಯಿದೆ. ಮಾನ್ಯ ಮುಖ್ಯಮಂತ್ರಿಯವರು ಇಲ್ಲೇ ಇದ್ದಾರೆ. ಅವರಿಗೆ ಮೊದಲು ವಾಸದ ಮನೆ ಜಾಗದ ಹಕ್ಕು ಪತ್ರ ಕೊಡಬೇಕು. ಅವರಿಗೆ ಮನೆ ಕೊಡಬೇಕು, ಕುಡಿಯುವ ನೀರು ಕೊಡಬೇಕು, ವಿದ್ಯುತ್ ಕೊಡಬೇಕು, ಅವರು ಸಾಗುವಳಿ ಮಾಡುತ್ತಿದ್ದರೆ ಆ ಭೂಮಿಯನ್ನು ಮಂಜೂರು ಮಾಡಬೇಕು. ಇದಕ್ಕೆ ಒಂದು ವಿಶಿಷ್ಟವಾದಂತಹ ಕಾರ್ಯಕ್ರಮವನ್ನು ರೂಪಿಸಿ ಯಾರಾದರೂ ಜವಾಬ್ದಾರಿ ತೆಗೆದುಕೊಂಡು ಇದರ ಬಗ್ಗೆ ಲಕ್ಷ್ಯ ಕೊಡಿ. ಇದು ಇಡೀ ರಾಜ್ಯದ ತುಂಬೆಲ್ಲಾ ಇಲ್ಲ. ಕೆಲವು ಜಿಲ್ಲೆಗಳಲ್ಲಿ ಇವೆ. ಇದನ್ನು ನಿರ್ಮೂಲನೆ ಮಾಡುವುದಕ್ಕೆ ಏನೂ ತೊಂದರೆ ಇಲ್ಲ. ಸುಲಭವಾಗಿ ಮಾಡಬಹುದು.

ಶ್ರೀ ಜಗದೀಶ್ ಶೆಟ್ಟರ್: ಒಂದು time bound ಹಾಕಿಕೊಳ್ಳಬೇಕು.

ಅಧ್ಯಕ್ಷರು: ಹಾಕಿಕೊಳ್ಳಿ ಏನೂ ತೊಂದರೆ ಇಲ್ಲ.

ಶ್ರೀ ಆರ್. ಅಶೋಕ್: ಸಾರ್, ಹೇಗೆ ನಕ್ಸಲರು ವಾಪಸ್ಸು ಬರುತ್ತಾರೆ ಅವರಿಗೆ ಒಂದು ಕಮಿಟಿ ಮಾಡಿದೆ ಅದೇ ರೀತಿ ಅಲ್ಲೊಂದು ಕಮಿಟಿ ಮಾಡಿ. ನೀವು ಹೇಳಿದ ಸಮಸ್ಯೆಗಳು ಏನಿವೆ. ಅವರಿಗೆ ಹಕ್ಕುಪತ್ರಗಳನ್ನು ಕೊಡಬೇಕು, ಭೂಮಿ ಕೊಡಬೇಕು, ಅದಕ್ಕೆ ಒಂದು ಕಮಿಟಿ ಮಾಡಿ ಅದಕ್ಕೆ ಮಾನ್ಯ ಗೃಹಸಚಿವರೆ ಅಧ್ಯಕ್ಷರಿರಲಿ. 2 ಅಥವಾ 3 ವರ್ಷ ಸಮಯ ಕೊಟ್ಟು ಅವರಿಗೆ ಎಲ್ಲಾ ಪರಿಹಾರ ಸಿಗುವಂತೆ ಮಾಡಲಿ. ನಕ್ಸಲರ ಹಾವಳಿ ಕಡಿಮೆಯಾಗುತ್ತದೆ.

ಅಧ್ಯಕ್ಷರು: ಆರು ತಿಂಗಳಿನಲ್ಲಿ ಮಾಡಬಹುದು. ನಮ್ಮ ಎಸ್.ಪಿಗಳು, ಡಿ.ಸಿಗಳು ಮನಸ್ಸು ಮಾಡಿದರೆ ಮೂರು ತಿಂಗಳಿನಲ್ಲಿ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಬಹುದು.

ಶ್ರೀ ವಿ. ಸುನೀಲ್ ಕುಮಾರ್: ಮಾನ್ಯ ಅಧ್ಯಕ್ಷರೆ, ಆ ಭಾಗದಲ್ಲಿ ಅರಣ್ಯ ಇಲಾಖೆಯವರು ಒಂದು ಮೋರಿ ಮಾಡಲು ಬಿಡುತ್ತಿಲ್ಲ. ಇಂತಹ ಗಂಭೀರವಾದಂತಹ ಪರಿಸ್ಥಿತಿ ಇರಬೇಕಾದರೆ . . .

ಅಧ್ಯಕ್ಷರು: ಮೋರಿ ಮಾಡುವುದು ಒಂದೇ ಅಲ್ಲ. ಶಿವಮೊಗ್ಗ ತಾಲ್ಲೂಕಿನಲ್ಲಿ NH ನಲ್ಲಿ ಬ್ರಿಡ್ಜ್ ಮಂಜೂರಾಗಿದೆ. ಆ ಬ್ರಿಡ್ಜ್ ಮಾಡಲು ಮಾವಿನ ಮರವನ್ನು ತೆಗೆಯಬೇಕು. ಒಂದೂವರೆ ಎಕರೆ ಬಿಟ್ಟುಕೊಡಬೇಕು. ಒಳ್ಳೆಯ ಮಾತಿನಿಂದ ಬಿಡುಗಡೆ ಮಾಡುತ್ತೀರೋ ಇಲ್ಲವೋ ಎಂದು ಸ್ವಲ್ಪ ಎಚ್ಚರಿಕೆ ನೀಡಿದ್ದೇನೆ. ಇದಕ್ಕೊಂದು ಮಿತಿ ಇಲ್ಲವೇ? ಅರಣ್ಯ ಇಲಾಖೆಯವರು ಏನು ಮಹಾರಾಜರಾ ಇಲ್ಲ ಚಕ್ರಾಧಿಪತಿಗಳಾ? ಅವರು ಸರ್ಕಾರದ ಅಧೀನದಲ್ಲಿದ್ದಾರೆಯೇ ಇಲ್ಲವೇ?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧಪಕ್ಷದ ನಾಯಕರು): ಇದನ್ನು ಸರ್ಕಾರ ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು: ನಿಜ.

ಶ್ರೀ ಜಗದೀಶ್ ಶೆಟ್ಟರ್: ಇದರ ಬಗ್ಗೆ ಪ್ರತಿ ವರ್ಷವೂ ಚರ್ಚೆಯಾಗುತ್ತದೆ. ಆದರೆ ಅರಣ್ಯ ಸಚಿವರು, ಸಂಬಂಧಪಟ್ಟವರು ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಪ್ರತಿ ವರ್ಷವೂ ಇದು ಚರ್ಚೆಯಾಗುತ್ತಲೇ ಇರುತ್ತದೆ.

(ಗೊಂದಲ)

ಶ್ರೀ ವಿ. ಸುನೀಲ್ ಕುಮಾರ್: ನಾವು ಕಳೆದ ಅಧಿವೇಶನದಲ್ಲಿಯೂ ಈ ವಿಚಾರವಾಗಿ ಮಾತನಾಡಿದ್ದೇವೆ. ಮೂರು ವರ್ಷದಿಂದ ಹೇಳುತ್ತಿದ್ದೇವೆ. ಆ ಭಾಗದಲ್ಲಿ ಅಭಿವೃದ್ಧಿ ಚಟುವಟಿಕೆಗೆ ಹಣವನ್ನು ಇಡಬೇಕಾದರೆ, ಜನಪ್ರತಿನಿಧಿಗಳನ್ನು ಕೇಳಿ ಇಡಿ ಎಂದರೆ ಜನಪ್ರತಿನಿಧಿಗಳನ್ನು ಕೇಳುವುದಿಲ್ಲ. ಪೊಲೀಸ್ ಸ್ಟೇಷನ್‌ನಲ್ಲಿ ಕೇಳಿ ಎಲ್ಲಿ ಮೋರಿ ಮಾಡಬೇಕು, ಎಲ್ಲಿ ರಸ್ತೆ ಮಾಡಬೇಕು ಎಂದು ಹೇಳುತ್ತಿದ್ದಾರೆ. ಜನಪ್ರತಿನಿಧಿಗಳನ್ನು ಕೇಳಿ. ಜನಪ್ರತಿನಿಧಿಗಳಾದ ನಾವು ಹೇಳುತ್ತೇವೆ.

ಅಧ್ಯಕ್ಷರು: ಮಾನ್ಯ ಸಚಿವರೆ, ನಕ್ಸಲ್ affected area ದ ಶಾಸಕರು ಯಾರು ಇದ್ದಾರೆ ಎನ್ನುವುದು ತಮಗೆಲ್ಲಾ ಗೊತ್ತಿದೆಲ್ಲಾ, ಸದನ ಮುಗಿದ ನಂತರ ಒಂದು ಸಭೆಯನ್ನು ನೀವೇ ಕರೆಯಿರಿ. ಸಂಬಂಧಪಟ್ಟ ಅಧಿಕಾರಿಗಳು ಕುಳಿತುಕೊಂಡು ಅದಕ್ಕೆ ಒಂದು ಹೊಸ ರೂಪ ಕೊಟ್ಟು ಅವರ ಸಲಹೆ ತೆಗೆದುಕೊಂಡು ಆ ಪ್ರಕಾರ ಮಾಡಿ.

ಶ್ರೀ ವಿನಯಕುಮಾರ್ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹಸಚಿವರು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು, ಜಿಲ್ಲಾಧಾರಿಗಳು, ಜನಪ್ರತಿನಿಧಿಗಳನ್ನು ಕರೆದು thorough ಆಗಿ implement ಮಾಡುವುದಕ್ಕೆ ಏನೇನು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳ ವತಿಯಿಂದ ನಡೆಸುವಂತಹ ಕಾರ್ಯಕ್ರಮವನ್ನು ನಡೆಸಿದ್ದಾರೆ.

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ಅಧ್ಯಕ್ಷರೆ,. . .

ಅಧ್ಯಕ್ಷರು: ನಾನು ನಿಮಗೆ ಒಂದು ಮಾತು ಹೇಳುತ್ತೇನೆ. ಇದನ್ನು ಇಷ್ಟು ಲಘುವಾಗಿ ಭಾವಿಸಬೇಡಿ. ಇದರ ಬಗ್ಗೆ ಒಂದು ಮೀಟಿಂಗ್ ಮಾಡಿ. ಅದರಲ್ಲೇನು ತೊಂದರೆ?

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ಅಧ್ಯಕ್ಷರೆ, ನಾನು ಕೊಡಗಿನ ಉಸ್ತುವಾರಿ ಸಚಿವನಾಗಿದ್ದೇನೆ. ಮೊನ್ನೆ ತಿತಿಮತಿಗೆ ಭೇಟಿ ನೀಡಿದ್ದೆ. ನಾವು, Forest Minister, Social Welfare Minister, Revenue Minister, ಇವರೆಲ್ಲಾ ಕುಳಿತುಕೊಂಡು ಇದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಅಧಿಕಾರಿಗಳು ಏನು ಹೇಳುತ್ತಾರೆಂದರೆ, ನಮಗೆ ಸುಪ್ರೀಂಕೋರ್ಟ್ ಆದೇಶ ಇದೆ ಮತ್ತೊಂದು ಇದೆ ಎಂದು ಹೇಳುತ್ತಾರೆ. ನಾನು ಅದರ ವಿಚಾರ ಹೇಳಿದ್ದೇನೆ. ನೋಡಿ ನಿಮ್ಮ ಮನೆ forest ನೊಳಗೆ ಇದೆ. ನಿಮಗೆ ನೀರು ಬೇಕು, ಕರೆಂಟ್ ಬೇಕು, ಆಗ ಹುಲಿಯ ತೊಂದರೆ ಬರುವುದಿಲ್ಲ. ಈ ಗಿರಿಜನರು ಶತಮಾನಗಳಿಂದ ಇದ್ದಾರೆ. ಅವರಿಗೆ ನೀವು ಕೊಡಬೇಕಾದರೆ ತೊಂದರೆಯಾಗುವಂತೆ ಮಾಡುತ್ತಿದ್ದೀರಿ. ಆ ರೀತಿ ತೊಂದರೆ ಕೊಡಬಾರದು ಎಂದು ನಾನು ಈಗಾಗಲೇ ಮಾತನಾಡಿದ್ದೇನೆ. ನಾನು Forest Minister, Social Welfare Minister, Revenue Minister ರವರೊಡನೆ ಚರ್ಚೆ ಮಾಡಬೇಕು. ಮಾನ್ಯ ಅಪ್ಪಚ್ಚುರಂಜನ್‌ರವರೆ, ನಾನು ಹೋಗಿ ಬಂದಿದ್ದೇನೆ. ಇನ್ನೊಂದು ಬಾರಿ ನಾವು ನೀವು ಹೋಗೋಣ. ಹೋಗಿ ಬಂದು ಚರ್ಚೆ ಮಾಡೋಣ. 2–3 ಇಲಾಖೆಗಳು ಬರುತ್ತವೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್: Forest ಅಧಿಕಾರಿಗಳಿಗೆಲ್ಲಾ quarters ಅನ್ನು forest ನಲ್ಲಿಯೇ ಮಾಡಿ. ಅವರಿಗೇನು ಕರೆಂಟ್ ಕೊಡಬೇಡಿ, ನೀರು ಕೊಡಬೇಡಿ...,

(ಗೊಂದಲ)

ಅಧ್ಯಕ್ಷರು: ಈಗ ಸ್ವಲ್ಪ ನಾನು ಹೇಳುವುದನ್ನು ಕೇಳಿ. Affected areaದ ಶಾಸಕರ ಸಭೆಯನ್ನು ಕರೆದು ಅವರ ಸಲಹೆಯನ್ನು ತೆಗೆದುಕೊಂಡು ಆ ಪ್ರಕಾರವಾಗಿ ನಿರ್ದಿಷ್ಟ ಅವಧಿಯಲ್ಲಿ ಬಗೆಹರಿಸಿರಿ. ಅರಣ್ಯ ಇಲಾಖೆಯವರು Supreme Court ಎಂದು ಹೇಳುತ್ತಿರುತ್ತಾರೆ. ಅವರೆ ಆಡಳಿತವನ್ನು

ಮಾಡುವುದಾದರೆ ಅವರಿಗೆ ನೀವು ಬಿಟ್ಟುಬಿಡಿ. ಅವರು ಹೇಳುವುದನ್ನು ಕೇಳುವುದಕ್ಕೆ ಹೋಗಬೇಡಿ. You can bring a law. Law ಮಾಡುವವರು ನಾವಲ್ಲವೇನು? ಇದಕ್ಕೆ ಸಂಬಂಧಪಟ್ಟಂತೆ ಸಭೆ ಕರೆಯುತ್ತಾರೆ ಬಿಡಿ.

ಶ್ರೀ ವಿ. ಸುನೀಲ್ ಕುಮಾರ್: ಮಾನ್ಯ ಅಧ್ಯಕ್ಷರೆ, ತಾವು ಅಭಿವೃದ್ಧಿ ವಿಚಾರ ಹೇಳಿದ್ದೀರಿ. ಆದರೆ ನಕ್ಸಲರ ಶರಣಾಗತಿಯ ಬಗ್ಗೆ ಹೇಳಬೇಕಲ್ಲವೇ?

ಅಧ್ಯಕ್ಷರು: ಮಾನ್ಯ ಗೃಹಸಚಿವರು ಮೀಟಿಂಗ್ ಕರೆದು ಚರ್ಚೆಯನ್ನು ಖಂಡಿತವಾಗಿ ಮಾಡುತ್ತಾರೆ. ಡಾ॥ ಕೆ. ಸುಧಾಕರ್ ಪ್ರಶ್ನೆಯನ್ನು ಕೇಳಬೇಕಾಗಿದ್ದು ಅವರು ಸದನದಲ್ಲಿ ಇಲ್ಲ. ಶ್ರೀ ಎಂ.ಕೃಷ್ಣಾರೆಡ್ಡಿಯವರೆ ತಾವು ಪ್ರಶ್ನೆಯನ್ನು ಕೇಳಿ.

ಹೈನುಗಾರಿಕೆ ವೃತ್ತಿಯಲ್ಲಿ ತೊಡಗಿರುವ ರೈತರು

05 (14); ಶ್ರೀ ಕೃಷ್ಣಾರೆಡ್ಡಿ ಎಂ (ಚಿಂತಾಮಣಿ)

ಅ) ಚಿಂತಾಮಣಿ ತಾಲ್ಲೂಕಿನಲ್ಲಿ ಹೈನುಗಾರಿಕೆ ವೃತ್ತಿಯಲ್ಲಿ ತೊಡಗಿರುವ ರೈತರ ಸಂಖ್ಯೆ ಎಷ್ಟು (ಮಾಹಿತಿ ನೀಡುವುದು);

ಆ) ಹೈನುಗಾರಿಕೆ ವೃತ್ತಿಯಲ್ಲಿ ತೊಡಗಿರುವ ರೈತರಿಗೆ ಸರ್ಕಾರದ ವತಿಯಿಂದ ಯಾವ್ಯಾವ ಯೋಜನೆಗಳನ್ನು ಜಾರಿಗೊಳಿಸಲಾಗಿದೆ (ಮಾಹಿತಿ ನೀಡುವುದು):

ಇ) ಹೈನುಗಾರಿಕೆ ವೃತ್ತಿಯಲ್ಲಿ ತೊಡಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನಾಂಗದವರಿಗೆ ವಿಶೇಷ ಯೋಜನೆಗಳನ್ನು ರೂಪಿಸಲಾಗಿದೆಯೇ (ಮಾಹಿತಿ ನೀಡುವುದು)?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು)

ಅ) ಚಿಂತಾಮಣಿ ತಾಲ್ಲೂಕಿನಲ್ಲಿ ಹೈನುಗಾರಿಕೆ ವೃತ್ತಿಯಲ್ಲಿ ತೊಡಗಿರುವ ರೈತರ ಸಂಖ್ಯೆ: 27576